**ದಿನಾಂಕ 04.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– ಶ್ರೀ ಎ.ಪಿ.ಎಸ್. 3ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಮತ್ತು 2ನೇ ವಾದಿ ವಾದಪತ್ರದಲ್ಲಿ ತಿಳಿಸಿರುವ ವಿಳಾಸದಲ್ಲಿ 16 ವರ್ಷಗಳಿಂದ ವಾಸ ಮಾಡುತ್ತಿದ್ದೇವೆ. ಸದರಿ ಮನೆ ಬಾಡಿಗೆ ಮನೆಯಾಗಿರುತ್ತದೆ. ನಾವು 1ನೇ ಪ್ರತಿವಾದಿಯೊಂದಿಗೆ ಮಾತನಾಡುವುದನ್ನು ಬಿಟ್ಟು 16 ವರ್ಷಗಳಾಗಿರುತ್ತದೆ. ನಮ್ಮ ತಾಯಿ ನಮ್ಮ ಜೊತೆ ವಾಸವಿರುತ್ತಾರೆ. ನಾವು ನಮ್ಮ ವಾದ ಪತ್ರದಲ್ಲಿ ನಮ್ಮ ತಾಯಿ 1ನೇ ಪ್ರತಿವಾದಿಯೊಂದಿಗೆ ಗುಂಡ್ಲುಪೇಟೆಯಲ್ಲಿ ವಾಸವಾಗಿದ್ದಾರೆಂದು ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು 2ನೇ ವಾದಿ ಖಾಸಗಿ ಕೆಲಸ ಮಾಡುತ್ತೇವೆ. ದಾವಾಸ್ತಿಗಳು ಅಕ್ರಮವಾಗಿ 1 ಮತ್ತು 3ನೇ ಪ್ರತಿವಾದಿಗಳ ಹೆಸರಿಗೆ ಖಾತೆ ಆಗಿರುವ ಬಗ್ಗೆ ನಾವು ಪಹಣಿ, ವಿಲ್ ಮತ್ತು ನೋಂದಾಯಿತ ದಾಖಲೆಗಳನ್ನು ನೋಡಿದ್ದರಿಂದ ತಿಳಿದುಬಂದಿರುತ್ತದೆ. ನಮ್ಮ ತಾತನ ಹೆಸರು ಗುಂಡಪ್ಪಶೆಟ್ಟಿ ಹಾಗೂ ಅವರ ತಂದೆಯ ಹೆಸರು ಗುಂಡಪ್ಪಶೆಟ್ಟಿ ಎಂದರೆ ಸರಿ . ನಿಪಿ–4 ರಲ್ಲಿ ದಾಖಲಾಗಿರುವ ವನಜಾಕ್ಷಮ್ಮನವರು ನಮ್ಮ ದೊಡ್ಡಮ್ಮನಾಗಿರುತ್ತಾರೆ. ನಿಪಿ–4 ರಂತೆ ದಾವಾ ಐಟಂ–1 ರ ಆಸ್ತಿಯ ಖಾತೆ 1ನೇ ಪ್ರತಿವಾದಿ ಹಾಗೂ 1ನೇ ಪ್ರತಿವಾದಿ ರವರ ಅಣ್ಣನ ಹೆಂಡತಿ ವನಜಾಕ್ಷಮ್ಮ ನವರ ಹೆಸರಿಗೆ ಜಂಟಿ ಖಾತೆಯಾಗಿರುತ್ತದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಖಾತೆಯು ನಮ್ಮ ಗಮನಕ್ಕೆ ಬಾರದಂತೆ ಆಗಿರುತ್ತದೆ ಎಂದು ನುಡಿಯುತ್ತಾರೆ. 2009ನೇ ಸಾಲಿನಲ್ಲಿ ನಮ್ಮ ದೊಡ್ಡಪ್ಪ ನಟೇಶ್ ರವರು ಮರಣ ಹೊಂದಿದ ಕಾರಣ ದಾವಾ ಐಟಂ–1 ರ ಖಾತೆಯು ವನಜಾಕ್ಷಮ್ಮ ಹಾಗೂ 1ನೇ ಪ್ರತಿವಾದಿಯವರ ಹೆಸರಿಗೆ ಜಂಟಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ದೊಡ್ಡಪ್ಪ ನವರ ಜೀವಿತ ಕಾಲದಲ್ಲಿ ನಮ್ಮ ಹಾಗೂ ಅವರ ನಡುವೆ ವಿಭಾಗದ ಮಾತುಕತೆಯಾಗಿ ದಾವಾ ಐಟಂ –1 ರ ಆಸ್ತಿಯನ್ನು ನಮ್ಮ ದೊಡ್ಡಪ್ಪನ ಭಾಗಕ್ಕೆ ಹಾಗೂ ದಾವಾ ಐಟಂ–2 ರ ಆಸ್ತಿಯನ್ನು ನಮ್ಮ ತಂದೆಯ ಭಾಗಕ್ಕೆ ಬಿಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ವಿಭಾಗದ ಮಾತುಕತೆಯಿಂದ ದಿಃ16.06.2014ರಂದು 1ನೇ ಪ್ರತಿವಾದಿ ಹಾಗೂ ನಮ್ಮ ದೊಡ್ಡಮ್ಮನವರ ನಡುವೆ ನೋಂದಾಯಿತ ವಿಭಾಗ

ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ದೊಡ್ಡಮ್ಮನಿಗೆ ಬಂದ ಭಾಗದ ಆಸ್ತಿಯಲಿಲ ಜಹೆಚ್ಚು ವಿಸ್ತೀರ್ಣ ಇದ್ದ ಕಾರಣ ದಿ:16.06.2014ರ ವಿಭಾಗ ಪತ್ರದಂತೆ ನಮ್ಮ ತಂದೆಗೆ ಹೆಚ್ಚುವರಿಯಾಗಿ ರೂ:1,50,000/- ಹಣ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಂತೆ ನಮ್ಮ ತಂದೆಯ ಭಾಗಕ್ಕೆ ತೆಳ್ಳನೂರು ಗ್ರಾಮದ ಒಂದು ಖಾಲಿ ನಿವೇಶನ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ನಿವೇಶನವನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ .

ನನ್ನ ಹೆಂಡತಿಯ ಹೆಸರು ಮಮತ ಎಂದರೆ ಸರಿಯಲ್ಲ. ಪ್ರತಿವಾದಿ 2(ಎ) ರವರ ಹೆಂಡತಿ ಹೆಸರು ಮುಮತ ಎಂದರೆ ನನಗೆ ಗೊತ್ತಿಲ್ಲ. ನನಗೆ 2ನೇ ಪ್ರತಿವಾದಿಯವರ ಮಕ್ಕಳುಗಳ ಬಗ್ಗೆ ತಿಳಿದಿರುತ್ತದೆ. ನಮ್ಮ ಮತ್ತು ಅವರ ನಡುವೆ ಸಂಪರ್ಕ ಇಲ್ಲದ ಇದ್ದ ಕಾರಣ 2ನೇ ಪ್ರತಿವಾದಿಯವರ ಸೊಸೆಯಂದಿರ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ದೊಡ್ಡಮ್ಮ ವನಜಾಕ್ಷಮ್ಮ ನವರ ಅಣ್ಣನ ಮಗಳು ಮಮತ ರವರೇ ಪ್ರತಿವಾದಿ 2(ಎ) ರವರ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ದಿ:16.06.2014ರ ವಿಭಾಗ ಪತ್ರಕ್ಕೆ ಸದರಿ ಮಮತ ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

3ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರ ಹಾಗೂ ದಾಖಲೆಗಳ ಕುರಿತು ನಾನು ತಿಳಿದುಕೊಂಡಿರುತ್ತೇನೆ. ದಿ:16.06.2014ರ ವಿಭಾಗ ಪತ್ರಕ್ಕೆ 3ನೇ ಪ್ರತಿವಾದಿಯು ಸಹ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವನಜಾಕ್ಷಮ್ಮ ನವರು ದಾವಾ ಐಟಂ -1 ರ ಆಸ್ತಿಯನ್ನು ವಿಭಾಗದ ಪತ್ರದ ಮೂಲಕ ಪಡೆದುಕೊಂಡು ಸದರಿ ಆಸ್ತಿಯ ಮೇಲೆ ಸಂಪೂರ್ಣ ಹಕ್ಕುಳ್ಳವರಾಗಿ ದಾವಾ ಐಟಂ -1 ಆಸ್ತಿಯನ್ನು ಅದೇ ದಿನ 3ನೇ ಪ್ರತಿವಾದಿಯ ಪರವಾಗಿ ಮರಣ ಶಾಸನ ಪತ್ರ ಬರೆದಿರುತ್ತಾರೆಂದರೆ ಸರಿಯಲ್ಲ. ಸದರಿ ಮರಣ ಶಾಸನ ಪತ್ರಕ್ಕೆ 1ನೇ ಪ್ರತಿವಾದಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆಂದೆರ ಸರಿಯಲ್ಲ. ದಾವಾ ಐಟಂ -1 ರ ಆಸ್ತಿಯ ಮೇಲೆ 1ನೇ ಪ್ರತಿವಾದಿಗಾಗಲಿ ಅಥವಾ ಅವರ ಮಕ್ಕಳಾದ ನಮಗಾಗಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದ ಆಧಾರದ ಮೇಲೆ ದಾವಾ ಐಟಂ -1 ರ ಖಾತೆಯು ವನಜಾಕ್ಷಮ್ಮ ನವರ ಹೆಸರಿಗೆ ದಾಖಲಾಗಿ, ನಂತರ ಮರಣ ಶಾಸನ ಪತ್ರದ ಆಧಾರದ ಮೇಲೆ 3ನೇ

ಪ್ರತಿವಾದಿಯ ಹೆಸರಿಗೆ ಖಾತೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯ ಹೆಸರಿಗೆ ಆರ್.ಎ.113/2016ರ ಆದೇಶದಂತೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಪೂರ್ವದಲ್ಲಿ ವಿಭಾಗ ಕೋರಿ 1ನೇ ಪ್ರತಿವಾದಿಗೆ ನೋಟೀಸು ನೀಡಲು ಯಾವುದೇ ತೊಂದರೆ ಇರಲಿಲ್ಲ.

ನಮ್ಮ ವಾದ ಪತ್ರದದಲ್ಲಿ ನಮೂದಿಸಿರುವಂತೆ ಯಾವ ಸ್ಥಳದಲ್ಲಿ , ಯಾವ ದಿನಾಂಕದಂದು ಹಾಗೂ ಯಾರ ಸಮ್ಮುಖದಲ್ಲಿ ಪಂಚಾಯ್ತಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಯಾವುದೇ ಪಂಚಾಯ್ತಿ ಮಾಡಿರುವುದಿಲ್ಲ ಹಾಗೂ ನಾವು 2010ನೇ ಸಾಲಿನಲ್ಲಿ ನಮ್ಮ ತಂದೆಯೊಂದಿಗೆ ಭಿನ್ನಾಭಿಪ್ರಾಯ ಉಂಟಾಗಿ ನಮ್ಮ ತಾಯಿಯನ್ನು ನಮ್ಮೊಂದಿಗೆ ಕರೆದುಕೊಂಡು ಹೋಗಬೇಕಾದರೆ ಮಾತನಾಡಿರುವುದು ಹೊರತುಪಡಿಸಿ ಮತ್ತೊಮ್ಮೆ ಮಾತನಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾಸ್ತಿಗಳು ನಮ್ಮ ತಾತ ಗುಂಡಪ್ಪನವರ ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದದಿಲ್ಲ ಎಂದರೆ ಸರಿಯಲ್ಲ. ನಿಪಿ–12 ಮತ್ತು 13 ರ ದಾಖಲೆಯನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ತಿಗಳು ಹಾಗೂ ತೆಳ್ಳನೂರು ಗ್ರಾಮದ ಖಾಲಿ ನಿವೇಶನ ನಮ್ಮ ತಾತ ಗುಂಡಪ್ಪಶೆಟ್ಟಿರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರ ವಿರುದ್ಧ ವಿಭಾಗ ಕೋರುವ ಯಾವುದೇ ಹಕ್ಕನ್ನು ನಾವು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ದಿಃ16.06.2014ರ ವಿಭಾಗ ಪತ್ರದಂತೆ ಹಾಗೂ ವನಜಾಕ್ಷಮ್ಮ ನವರು ಬರೆದುಕೊಟಟ್ಟಿರುವ ಮರಣ ಶಾಸನ ಪತ್ರದಂತೆ 3ನೇ ಪ್ರತಿವಾದಿ ದಾವಾ ಐಟಂ –1 ರ ಆಸ್ತಿಯ ಸಂಪೂರ್ಣ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು 15–16 ವರ್ಷಗಳಿಂದ 3ನೇ ಪ್ರತಿವಾದಿ 1ನೇ ಪ್ರತಿವಾದಿಯವರ ಕುಟುಂಬದವರಿಗೆ ಚಿರಪರಿಚಿತರಾಗಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ದೊಡ್ಡಪ್ಪ ನಟೇಶ್ ಹಾಗೂ ವನಜಾಕ್ಷಮ್ಮ ನವರ ಜೀವಿತಾ ಕಾಲದಲ್ಲಿ ಮತ್ತು ಅವರ ಮರಣದ ನಂತರವೂ 3ನೇ ಪ್ರತಿವಾದಿಯು ದಾವ ಐಟಂ –1 ರ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ನಮ್ಮ ತಂದೆ 1ನೇ ಪ್ರತಿವಾದಿ ಹಾಗೂ ದೊಡ್ಡಪ್ಪ, ದೊಡ್ಡಮ್ಮನವರಿಗೆ ವಿಶ್ವಾಸಿಯಾಗಿದ್ದು ಅವರ ಕಷ್ಟಸುಖಗಳಲ್ಲಿ

ಭಾಗಿಯಾಗಿದ್ದರಿಂದ ವನಜಾಕ್ಷಮ್ಮ ನವರು 3ನೇ ಪ್ರತಿವಾದಿ ಪರ ಮರಣ ಶಾಸನ ಪತ್ರ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಒಡನಾಟ ಹೊಂದಿದ್ದ ಕಾರಣದಿಂದಲೇ ದಿಃ16.06.2014 ರ ಮರಣ ಶಾಸನ ಪತ್ರಕ್ಕೆ 1ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಗಳ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲದಿದ್ದರು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ